ಈಗ ಮಾನ್ಯ ಮಹದೇವ್ ಪ್ರಸಾದ್‌ರವರು.

**ಅಧ್ಯಕ್ಷರು:** ಆಯಿತು ಕುಳಿತುಕೊಳ್ಳಿ. ಅವಕಾಶ ಕೊಟ್ಟಿದ್ದೇನೆ, ರೂಲಿಂಗ್ ಕೊಟ್ಟಿದ್ದೇನೆ.....

**ಶ್ರೀ ಧರ್ಮಸಿಂಗ್:** 175(1)ರಲ್ಲಿ ಮಾಡಲಿಕ್ಕೇ ಆಗುವುದಿಲ್ಲ.

**(ಗೊಂದಲ)**

**(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸೇರಿದಂತೆ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿದರು)**

**(ಗೊಂದಲ)**

**ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ**

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್(ಗುಂಡ್ಲುಪೇಟೆ):** ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2006ರ ಫೆಬ್ರವರಿ 24ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):** ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**(ಗೊಂದಲ)**

**ಪ್ರಸ್ತಾವವನ್ನು ಮಂಡಿಸಲಾಯಿತು.**

**6. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ**

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ):** ಮಾನ್ಯ ಅಧ್ಯಕ್ಷರೆ, ಸಂವಿಧಾನದಡಿಯಲ್ಲಿ ಗೌರವಾನ್ವಿತ ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಪ್ರತಿಯಾಗಿ ಸದನ ಅವರಿಗೆ ವಂದನೆ ಅರ್ಪಿಸತಕ್ಕಂಥದ್ದು ಸತ್‌ಸಂಪ್ರದಾಯವಾಗಿ ನಡೆದುಕೊಂಡು ಬಂದಿರತಕ್ಕಂಥ ಒಂದು ಪರಂಪರೆ. ಇದು ಒಂದು ಸದನದ ಕರ್ತವ್ಯವೂ ಕೂಡ ಆಗಿದೆ. ಇಂಥ ಒಂದು ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ಅಗೌರವ ಸೂಚಿಸುವ ರೀತಿಯಲ್ಲಿ . . . . .

**(ಗೊಂದಲ)**

**(ಬಾವಿಯಲ್ಲಿ ಕಾಂಗ್ರೆಸ್ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)**

**ಅಧ್ಯಕ್ಷರು:** ದಯಮಾಡಿ, ನಿಮ್ಮ ಆಸನಗಳಿಗೆ ಹೋಗಿ. ಈಗ I have given my ruling. ನೀವು ಹೇಳಿದ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಕೊಟ್ಟಿದ್ದೇನೆ. ದಯಮಾಡಿ, ನಿಮ್ಮ ನಿಮ್ಮ ಆಸನಗಳಿಗೆ ಹೋಗಬೇಕು. ವಂದನಾ ನಿರ್ಣಯವನ್ನು ಮಂಡನೆ ಮಾಡಿ ಮಾತನಾಡುವುದಕ್ಕೆ ನೀವು ಅವಕಾಶ ಕೊಡಬೇಕು.